for the residents of six Ministers, it does not amount to much.

Sri S. SRINIVASA IYENGAR.—I seek leave to withdraw my cut motion.

The cut motion was, by leave, withdrawn.

Necessity to include all Deputy and Assistant Commissioners in I. A. S. list.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರ).—ಸ್ಪೀಮಿ, ನನ್ನ ಖೋತಾ ಸೂಚನೆ ಈ ರೀತಿಯಿದೆ:—

"25 ಸಾಮಾನ್ಯಾಡಳಿತ (ಬಿ. ಸಿ. ಮತ್ತು ಎಫ್. ಇವುಗಳನ್ನು ಬಿಟ್ಟು) ಎಂಬ ಬಾಬಿನಲ್ಲಿ ಕೋರಿರುವ 44,91,150 ರೂಪಾಯಿಗಳ ಡಿಮ್ಯಾಂಡ್ ಮನವಿಯ ಸಂಬಂಧದಲ್ಲಿ 100 ರೂಪಾಯಿಗಳನ್ನು ಕಡಮೆ ಮಾಡಬೇಕು, (ಎಲ್ಲ ಡೆಪ್ಯುಟಿ ಕಮಿಷನರುಗಳ ಮತ್ತು ಅಸಿಸ್ಟೆಂಟ್ ಕಮಿಷನರುಗಳ ಹೆಸರುಗಳನ್ನೂ ಐ.ಎ.ಎಸ್. ಪಟ್ಟಿಯಲ್ಲಿ ಸೇರಿಸುವುದರ ಅವಶ್ಯಕತೆಯ ವಿಚಾರದಲ್ಲಿ ಚರ್ಚೆ ನಡೆಯುವಂತೆ ಮಾಡುವುದಕ್ಕಾಗಿ.)"

ಸ್ಪೀಮಿ, ಅಧ್ಯಕ್ಷ ಮಹಾಶಯರೆ, ಈಗ ಐ. ಎ. ಎಸ್. ಮತ್ತು ಐ. ಪಿ. ಎಸ್. ಆಫೀಸರುಗಳನ್ನು ಇಲ್ಲಿ ಕೆಲವಾರು ತಿಂಗಳುಗಳಿಂದ ಸರ್ಕಾರದವರು ನೇಮಕ ಮಾಡಿದ್ದಾರೆಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಈ ಸಂದರ್ಭದಲ್ಲಿ ಒಂದು ಉದಾಹರಣೆ ಕೊಡುತ್ತೇನೆ. ಈಗ ಈ ಸಭೆಯಲ್ಲಿರುವವರೆಲ್ಲರೂ ಅಸೆಂಬ್ಲಿ ಸದಸ್ಯರು. ಆದರೆ ನಾವು ಕುಳಿತಿರುವ ಸ್ಥಾನಕ್ಕೂ ಮತ್ತು ಸಭಾನಾಯಕರು ಕುಳಿತಿರುವ ಸ್ಥಾನಕ್ಕೂ ಎಷ್ಟೋ ವ್ಯತ್ಯಾಸವಿದೆ. ಅವರಿಗೆ 1,500 ರೂಪಾಯಿ ಸಂಬಳ ಬರಬಹುದು, ನಮಗೆ 150 ರೂಪಾಯಿ ಬರಬಹುದು. ಪ್ರತಿ ಜಿಲ್ಲೆಯಲ್ಲೂ ಒಬ್ಬೊಬ್ಬರು ಡೆಪ್ಯುಟಿ ಕಮಿಷನರಿದ್ದಾರೆ. ಆದರೆ ಒಬ್ಬೊಬ್ಬರಿಗೆ ಒಂದೊಂದು ಗ್ರೇಡಿರುವುದನ್ನು ಮೊನ್ನೆ ಚರ್ಚೆ ಮಾಡಿದ್ದಾರೆ. ಐ. ಎ. ಎಸ್. ಮತ್ತು ಐ. ಪಿ. ಎಸ್. ಅಧಿಕಾರಿಗಳನ್ನು ಯಾವ ರೀತಿ ವಿಂಗಡಿಸಿದರೋ ತಿಳಿಯದು. ಒಳ್ಳೆಯ ಪರ್ಸನಾಲಟಿ ನೋಡಿ, ರಣಧೀರರು, ಧೈರ್ಯಶಾಲಿಗಳು ಎಂದು ಮೆಚ್ಚಿ ಐ. ಪಿ. ಎಸ್. ಹುದ್ದೆಗಳನ್ನು ಕೆಲವರಿಗೆ ಕೊಟ್ಟಿದ್ದಾರೋ ಏನೋ. ಈ ರೀತಿ ಭೇದಮಾಡಿ ಕೆಲವರನ್ನು ಐ. ಪಿ. ಎಸ್. ಮತ್ತು ಐ. ಎ. ಎಸ್. ಹುದ್ದೆಗಳಿಗೆ ನೇಮಿಸಿ ಬಾಕಿಯವರು ಅದೇ ಕೆಲಸ ಮಾಡುತ್ತಿದ್ದರೂ ಗ್ರೇಡುಗಳಲ್ಲಿ ಅವರವರಿಗೆ ವ್ಯತ್ಯಾಸಮಾಡಿರುವುದಕ್ಕೆ ಕಾರಣ ಗೊತ್ತಾಗಲಿಲ್ಲ. ಈ ದಿವಸ ಬೇಕಾದರೆ ಒಬ್ಬ ಕಾರ್ಯದರ್ಶಿಯನ್ನು ಐ. ಪಿ. ಎಸ್. ಆಫೀಸರಿಗೆ ಛಾಲೆಂಜ್ ಮಾಡಬಹುದು. ಈಗ ಒಂದು ಕಳುವಾದರೆ...

Mr. SPEAKER.—Your cut motion deals with only I. A. S.

ಶ್ರೀ ವಿ. ಆರ್. ನಾಯ್ಡು.—ಗ್ರೇಡುಗಳಲ್ಲಿ ವ್ಯತ್ಯಾಸವಾಗಿರುವುದರಿಂದ ನಿಜವಾಗಿಯೂ ಅನೇಕರು ವ್ಯಥೆಪಡುತ್ತಿದ್ದಾರೆ. ಐ. ಎ. ಎಸ್. ನವರಿಗೆ 1,800 ರೂಪಾಯಿ ಸಂಬಳವಿದೆ. ಆದರೆ ಎಲ್ಲರೂ ಮಾಡುವ ಕೆಲಸ ಒಂದೇ. ಹಾಗಿರುವಾಗ ಏಕೆ ಹೀಗೆ ಭೇದ ಮಾಡಬೇಕು? ಐ. ಎ. ಎಸ್. ನಲ್ಲಿ ಅವಕಾಶಕೊಡದಿರುವವರಿಗೆ ಹೆಚ್ಚಿನ ಗ್ರೇಡನ್ನು ಪಡೆಯಲು ಬೇರೆ ಅವಕಾಶವಿಲ್ಲ. ಅಣ್ಣತಮ್ಮಂದಿರಂತೆ ಕೆಲಸಮಾಡುವ ಒಂದೇ ಹುದ್ದೆಯ ಅಧಿಕಾರಿಗಳಿಗೆ ಭೇದಮಾಡಬಾರದು. 3 ಕೋಟಿ ಚಿಲ್ಲರೆ ರೂಪಾಯಿಗಳ ಖೋತಾ ಇದೆಯೆಂದು ಮೂರು ದಿವಸಗಳಿಂದ ಕೇಳುತ್ತಿದ್ದೇವೆ. ಹಾಗಿರುವಾಗ ಐ. ಎ. ಎಸ್. ಮತು ಐ. ಪಿ. ಎಸ್. ಅಧಿಕಾರಿಗಳಿಗೆ ಇಷ್ಟು ಜಾಸ್ತಿ ಸಂಬಳ ಕೊಡುವುದಕ್ಕೆ ಕಾರಣವಿಲ್ಲ. ಹೀಗೆ ವ್ಯತ್ಯಾಸಮಾಡಿದರೆ ಆದಳಿತದಲ್ಲಿ ಬಿಗಿ ತಪ್ಪಿಹೋಗುತ್ತದೆ. ಆದ್ದರಿಂದ ಕೇಂದ್ರ ಸರ್ಕಾರಕ್ಕೆ ಐ. ಎ. ಎಸ್. ಮತ್ತು ಐ. ಪಿ. ಎಸ್. ಎಂದು ಭೇದಮಾಡಿ ಅವಳಿಜವಳಿ ಮಕ್ಕಳಂತಿರುವವರಿಗೆ ಸಂಬಳ ಸಾರಿಗೆಗಳಲ್ಲಿ ವ್ಯತ್ಯಾಸಮಾಡುವುದು ಸರಿಯಲ್ಲವೆಂದು ನಾಳೆಯೇ ಬರೆದು, ಎಲ್ಲರಿಗೂ ಒಂದೇ ಸಮಮಾಡಿ, ಇಲ್ಲದಿದ್ದರೆ ಎಲ್ಲರಿಗೂ ಒಂದೇ ರೀತಿ ಹೆಚ್ಚುಮಾಡಿ ಎಂದು ತಿಳಿಸಬೇಕು. ಹಾಗೆ ಮಾಡಿದ್ದೇ ಆದರೆ ಅಧಿಕಾರಿಗಳಿಗೆ ಒಂದು ನವಚೈತನ್ಯ ಕೊಟ್ಟಂತಾಗುತ್ತದೆ. ದಕ್ಷತೆಯಿಂದ ಕೆಲಸಮಾಡುವ ಡೆಪ್ಯುಟಿ ಕಮಿಷನರುಗಳಿಗೆ ಸಾಕಷ್ಟು ಪ್ರೋತ್ಸಾಹ ದೊರೆತಿಲ್ಲ. ಆದ್ದರಿಂದ ಸರ್ಕಾರದವರು ದಯವಿಟ್ಟು ಜಾಗ್ರತೆ ಈ ವಿಚಾರವನ್ನು ಸರಿಪಡಿಸಬೇಕು.

ಇನ್ನು ಐ. ಪಿ. ಎಸ್. ವಿಚಾರ ಮಾತ್ರ ಹೇಳಿ ನನ್ನ ಭಾಷಣ ಮುಗಿಸುತ್ತೇನೆ. ಈಗ ಕಾರ್ಕಳ ಬಲ್ಲುಗಳಿಗೆ 35 ರೂಪಾಯಿ ಸಂಬಳವಿದೆ...

ಅಧ್ಯಕ್ಷರು.—ಈ ಖೋತಾ ಸೂಚನೆ ಐ. ಎ. ಎಸ್. ಅಧಿಕಾರಿಗಳಿಗೆ ಮಾತ್ರ ಸಂಬಂಧಪಟ್ಟಿದೆ.

ಶ್ರೀ ವಿ. ಆರ್. ನಾಯ್ಡು.—ಇದೇ ರೀತಿ ಅಕಾರಾ ಕಛೇರಿಯಲ್ಲಿರುವ ಬಡವರೂ ಸಹ 35 ರೂಪಾಯಿ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಅವರ ವಿಷಯವನ್ನೂ ಸಹ ಪರಿಶೀಲನೆಬೇಕಾಗಿದೆ.

Mr. SPEAKER.—I do not allow you to refer to that.

ಶ್ರೀ ವಿ. ಆರ್. ನಾಯ್ಡು.—ಸಾಧ್ಯವಾದಮಟ್ಟಿಗೂ ಐ. ಎ. ಎಸ್., ಐ. ಪಿ. ಎಸ್. ಅಧಿಕಾರಿಗಳು ಮತ್ತು ಇತರರು ಅವರ ದರ್ಜೆಯವರು ಯಾರಿದ್ದಾರೋ ಅವರಿಗೂ ಒಂದೇ ಸಮಾನಾದ ಸಂಬಳಸಾರಿಗೆ ಕೊಡುವಂತೆ ಮಾಡಬೇಕು. 35 ರೂಪಾಯಿ ತೆಗೆದುಕೊಳ್ಳುವ ಪೋಲೀಸು ಕಾರ್ಕಳ್ಳೇಬಲ್, ನಾರ್ಕೆಜೆಡೆಡ್ ಆಫೀಸರುಗಳು ಇವರಿಗೆಲ್ಲಾ ಸಂಬಳ ಸಾರಿಗೆ ಹೆಚ್ಚಿಸಿ ಸರ್ಕಾರದವರು ಒಂದೇ ಸಮನಾಗಿ ಪ್ರೋತ್ಸಾಹ ನೀಡಬೇಕು ಎಂದು ಪ್ರಾರ್ಥನೆಮಾಡಿ ಈ ಖೋತಾ ಸೂಚನೆಯನ್ನು ಸಭೆಯಮುಂದೆ ಮಂಡಿಸುತ್ತೇನೆ.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಜಿ. ಎ. ತಿಮ್ಮಪ್ಪಗೌಡ (ಆರಕಲಗೂಡು).—ಶ್ರೀಮಾನ್ ನಾಯ್ಡುರವರ ಖೋತಾ ಸೂಚನೆಯನ್ನು ಪುಷ್ಟೀಕರಿಸುತ್ತಾ ಒಂದೆರಡು ಮಾತುಗಳನ್ನು ಮಾತ್ರ ಹೇಳುತ್ತೇನೆ. ಇದು ಎಲ್ಲರಿಗೂ ಗೊತ್ತಿರುವುದೇ ಆಗಿದೆ. ಐ.ಎ.ಎಸ್. ಅನಿವಾರ್ಯವಾಗಿ ಎಲ್ಲಾ ಸಂಸ್ಥಾನಗಳಿಗೂ ಕೂಡ ಅನ್ಯಯಿಸಬೇಕಾಗಿ ಬಂದಿದೆ. ಇದರ ಪರಿಣಾಮವಾಗಿ ಏನಾಗಿದೆಯೆಂದರೆ ಸರ್ವಿಸ್‌ನಲ್ಲಿ ಮಟ್ಟಿಗೆ ಅಸಮಾಧಾನವ್ಯಂಟಾಗುವುದಕ್ಕೆ ಅವಕಾಶ ನೌಕರರಿಗೆ ಬಹಳವಾಗಿದೆ. ಇದೂ ಅಲ್ಲದೆ ಮಾನ್ಯ ಮಿತ್ರರು ಹೇಳಿದ ಹಾಗೆ, ಐ. ಎ. ಎಸ್. ಆಫೀಸರುಗಳಿಗೆ ಏನೋ ಒಂದು ವಿಧವಾದ ಸುಪೀರಿಯಾರಿಟಿ ಕಾಂಪ್ಲೆಕ್ಸ್ ಬಂದು 'ನಾವೇ ಬಹಳ ಮೇಧಾವಿಗಳು,

(ಶ್ರೀ ಜಿ. ಎ. ತಿಮ್ಮಪ್ಪಗೌಡ.)

ಬುದ್ಧಿವಂತರು, ಎಲ್ಲರಿಗಿಂತಲೂ ಮೇಲು' ಎಂಬ ಭಾವನೆ ಬೆಳೆಸಿಕೊಳ್ಳಲು ಅವಕಾಶವಾಗಿ ಅವರಲ್ಲಿ ಒಂದು ಸ್ಪೆಕಲಾಜಿಕಲ್ ಎಫೆಕ್ಟ್‌ನಿಂದ ಒಂದು ಭಾವನೆ ಕಂಡುಬರುತ್ತಿದೆ. ಅದನ್ನು ಪರಿಹಾರಮಾಡಲು ನಮ್ಮ ಸರ್ಕಾರಕ್ಕೆ ಸಾಧ್ಯವಿಲ್ಲ, ಅಧಿಕಾರ ವ್ಯಾಪ್ತಿಯಿಲ್ಲ ಎಂಬುದು ನಮಗೆ ಗೊತ್ತಿದೆ. ಆದರೆ ಈ ಒಂದು ಅಂತರದಿಂದ, 800 ರೂಪಾಯಿಗಳ ಸಂಬಳ ತೆಗೆದು ಕೊಳ್ಳುತ್ತಿದ್ದವರಿಗೆ ತಕ್ಷಣ ಹೆಚ್ಚಿಗೆ ಗ್ರೇಡು ದೊರೆತು ಅಧಿಕಾರವ್ಯಾಪ್ತಿಕ ಡ ಹೆಚ್ಚಾಗಿರುವುದು ಎಲ್ಲರಿಗೂ ಗೊತ್ತು. ಅದು ಸ್ವಾಭಾವಿಕವಾಗಿಯೇ ಇದೆ. ಇದೇನು ಐ. ಎ. ಎಸ್. ಸಿ೦ ಬಂತೋ, ನಮ್ಮ ಸರ್ವಿಸ್ ಎಲ್ಲಾ ಹಾಳುಮಾಡಿತು, ನಮ್ಮ ಪ್ರೋಗ್ರೆಸ್‌ಮೇಲೆ ನಮಗಿದ್ದ ಅವಕಾಶಕ್ಕೆ ಚ್ಯುತಿ ತಂದಿದೆ ಎಂದು ಅನೇಕ ಅಧಿಕಾರಿಗಳು ನನಗೆ ಸಿಕ್ಕಿದಾಗ ಹೇಳಿ ತಮ್ಮ ಅನಮಾಧಾನವನ್ನು ವ್ಯಕ್ತಪಡಿಸಿದ್ದಾರೆ.

ಇನ್ನೊಂದೇನೆಂದರೆ, ಈಗ ಕೆಲವರಿಗೆ ವಿಪರೀತ ಸಂಬಳ ಕೊಟ್ಟು ಸಣ್ಣ ನೌಕರರಿಗೆ ಅತಿ ಸ್ವಲ್ಪ ಸಂಬಳ ಕೊಡುತ್ತಾ ಇರುವುದರಿಂದ ಈ ಎರಡರ ಏರು ಪೇರುಗಳನ್ನು ನರಿಪಡಿಸುವುದು ಬಹಳ ಕಷ್ಟವಾಗಿದೆ. ನಮ್ಮ ಈಗಿನ ಹಣಕಾಸಿನ ಪರಿಸ್ಥಿತಿಯಲ್ಲಿ ಈಗ ಕೊಡ ಬೇಕಾಗಿರುವ ಹೆಚ್ಚಿನ ಸಂಬಳವನ್ನು ಕೂಡ ಕೊಡ ಫದಕ್ಕೆ ಸಾಧ್ಯವಾಗಿಲ್ಲ. ಈಗ ಇಂಡಿಯಾ ಸರ್ಕಾರ ದವರು ನಮ್ಮಲ್ಲೇ ಇಲಾಖೆಗಳಲ್ಲಿ ಕೆಲಸಮಾಡುವ ನಮ್ಮ ಅಧಿಕಾರಿಗಳಿಗೆ ಸೆಂಟ್ರಲ್ ಇಲಾಖೆಗಳಿಗೆ ಸರಿ ಸಮಾನಾದ ಸಂಬಳ ಗೊತ್ತುಮಾಡಿದರು. ಅದರಿಂದ ಅವರಿಗೆ ವಿಪರೀತವಾಗಿ ಸಂಬಳ ಹೆಚ್ಚಿ ಅದನ್ನು ಕೊಡಲು ನಮಗೆ ಕಷ್ಟವಾಗಿದೆ. ಈ ವಿಚಾರದಲ್ಲಿ ಮೈಸೂರು ಸರ್ಕಾರಕ್ಕೆ ಒಂದು ಸಲಹೆ ನೀಡುತ್ತೇನೆ. ಇಂಥ ಅನಾನುಕೂಲ ನಮ್ಮ ಸರ್ಕಾರಕ್ಕೆ ಮಾತ್ರವಲ್ಲದೆ ಮದ್ರಾಸು ಮತ್ತು ಬೊಂಬಾಯಿ ಸರ್ಕಾರಗಳಿಗೂ ಸಹ ಹೆಚ್ಚಾಗಿದೆ. ಸಂಬಳದ ಏರುಪೇರು ವಿಪರೀತ ವಾಗಿದೆ, ಇದನ್ನು ಸಮಾನಾಗಿ ಮಾಡಲು ನಮ್ಮ ನೌಕರರಿಗೂ ಸಂಬಳ ಹೆಚ್ಚಿಸುವುದಕ್ಕೆ ಕೇಂದ್ರದಿಂದ ಗ್ರಾಂಟು ಕೊಡಬೇಕು ಅಥವಾ ಕೇಂದ್ರ ಸರ್ಕಾರದ ವರು ಅವರ ಸರ್ವಿಸ್‌ನವರ ಸಂಬಳ ಸಾರಿಗೆ ಕಡಮೆ ಮಾಡಿಕೊಳ್ಳಲು ಪ್ರಯತ್ನಮಾಡಬೇಕು. ಹಾಗೆ ಮಾಡ ದಿದ್ದರೆ ಬಹಳ ತೊಂದರೆಯಾಗುತ್ತದೆ ಎಂದು ಕೇಂದ್ರ ದಲ್ಲಿ ಮನವಿಮಾಡಬೇಕು. ಇದರ ಪರಿಣಾಮ ಎಲ್ಲಿ ಹೇಗಾಗುತ್ತದೆಂದು ಯೋಚನೆಮಾಡುವುದಕ್ಕೆ ಕೂಡ ಕಷ್ಟವಾಗಿದೆ. ಈ ಕ್ಲಿಷ್ಟ ಸಮಸ್ಯೆಯನ್ನು ನಮ್ಮ ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ತಿಳಿಸಿ ಪರಿಹಾರ ಮಾಡುತ್ತಾರೆಂದು ನಂಬಿ ಈ ಎರಡು ಮಾತುಗಳಿಂದ ಈ ಸೂಚನೆಯನ್ನು ಪುಷ್ಟೀಕರಿಸುತ್ತೇನೆ.

*ಶ್ರೀ ಕೆ. ಹನುಮಂತಯ್ಯ (ಮುಖ್ಯ ಮಂತ್ರಿಗಳು).—ಸ್ವಾಮಿ, ಖೋತಾ ಸೂಚನೆ ಇರತಕ್ಕಂಥ ರೂಪದಲ್ಲಿ ಅದರ ತತ್ವವನ್ನು ಒಪ್ಪುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲಾ ಡೆಪ್ಯುಟಿ ಕಮಿಷನರುಗಳನ್ನೂ ಎಲ್ಲಾ ಅಸಿಸ್ಟೆಂಟ್ ಕಮಿಷನರುಗಳನ್ನೂ ಐ.ಎ.ಎಸ್. ಲಿಸ್ಟಿಗೆ ಸೇರಿನಬೇಕೆಂದಿದೆ. ಡೆಪ್ಯುಟಿ ಕಮಿಷನರಾಗಿ ರುವವರೆಲ್ಲಾ ಐ.ಎ.ಎಸ್. ಅಧಿಕಾರಿಗಳೇ. ಆದ್ದರಿಂದ ಆ ವಿಷಯದಲ್ಲಿ ಖೋತಾ ಸೂಚನೆಯ ಅಭಿಪ್ರಾಯ ಅನಾವಶ್ಯಕವಾಗಿದೆ. ಐ.ಎ.ಎಸ್. ರೂಲ್ಸ್ ಪ್ರಕಾರ ಡೆಪ್ಯುಟಿ ಕಮಿಷನರಾಗಿ ಪೋಸ್ಟ್ ಮಾಡಬೇಕಾದರೆ ಅವರು ಐ.ಎ.ಎಸ್. ಆಫೀಸರಾಗಿಯೇ ಇರಬೇಕು, ಬೇರೆಯವರನ್ನು ಮಾಡುವುದಕಾಗುವುದಿಲ್ಲ. ಎಲ್ಲ ಅಸಿಸ್ಟೆಂಟ್ ಕಮಿಷನರುಗಳನ್ನೂ ಐ.ಎ.ಎಸ್. ಲಿಸ್ಟಿಗೆ ಸೇರಿಸಿಕೊಳ್ಳಬೇಕೆಂದು ಹೇಳಿದರೆ ಅದನ್ನು ಕಾರ್ಯ ರೂಪಕ್ಕೆ ತರಲು ಸಾಧ್ಯವಾಗುವುದಿಲ್ಲ. ರೂಲ್ಸಿದೆ, ಅದರ ಪ್ರಕಾರ ಇಂಟರ್‌ವ್ಯೂ ಮಾಡಿ ಅರ್ಹತೆ, ಯೋಗ್ಯತೆ ಇತ್ಯಾದಿಗಳನ್ನು ನೋಡಿ ಐ.ಎ.ಎಸ್. ಲಿಸ್ಟಿಗೆ ಸೇರಿಸುತ್ತಾರೆ. ಆದರೆ ಮೈಸೂರು ಸರ್ಕಾರ ದವರು ಮಾತ್ರ ನಮ್ಮ ಅಸಿಸ್ಟೆಂಟ್ ಕಮಿಷನರುಗಳು ಮತ್ತು ಡೆಪ್ಯುಟಿ ಕಮಿಷನರುಗಳನ್ನು ಐ.ಎ.ಎಸ್. ಪಟ್ಟಿಗೆ ಸೇರಿಸಲು ಎಲ್ಲಾ ಪ್ರಯತ್ನಗಳನ್ನೂ ಮಾಡಿದ್ದಾರೆ; ಅದರಲ್ಲಿ ಬಹಳ ಮಟ್ಟಿಗೆ ಯಶಸ್ವಿಯಾಗಿದ್ದಾರೆ. ಈಗಲೂ ಈ ವಿಷಯ ಗಮನದಲ್ಲಿಟ್ಟು ಎಷ್ಟು ಮಂದಿಯನ್ನು ಸೇರಿಸುವುದಕ್ಕೆ ನಿಯಮಾನು ಸಾರವಾಗಿ ಸಾಧ್ಯವೊ ಅಷ್ಟು ಮಂದಿಯನ್ನು ಸೇರಿ ಸಲು ಪ್ರಯತ್ನಪಡುತ್ತೇವೆ. ಶ್ರೀಮಾನ್ ನಾಯ್ಡು ರವರು ಹೇಳಿದ ಮಾತುಗಳನ್ನು ಬಹಳ ಗಮನವಿಟ್ಟು ಕೇಳಿದ್ದೇನೆ. ಆದ್ದರಿಂದ ಅವರು ತಮ್ಮ ಖೋತಾ ಸೂಚನೆಯನ್ನು ಪಾಪಸು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಆರ್. ನಾಯ್ಡು.—ನನ್ನ ಖೋತಾ ಸೂಚನೆಯನ್ನು ಹಿಂದಕ್ಕೆ ತೆಗೆದುಕೊಳ್ಳಲು ಅನುಮತಿ ಬೇಡುತ್ತೇನೆ.

The cut motion was, by leave, withdrawn.

Mr. SPEAKER.—The House will now rise for lunch and meet at 3-30.

The House rose for Lunch at Three of the Clock and reassembled at Thirty Minutes past Three of the Clock.

(Mr. Speaker in the Chair.

(Sri K. Lakkappa rose)

Mr. SPEAKER.—Can you kindly point out where this village administration comes under General Administration ? I could not find it.

Sri K. LAKKAPPA (Channapatna).—I mean general administration of the Village Panchayet.

Mr. SPEAKER.—That is true. But what is the page in the Budget where in the provision is made ? Since I felt a doubt just now I am asking you. Or, you may select one of the remaining two cut motions. You can look into it later and from next time onwards you may be sure about such points.

Sri K. LAKKAPPA.—I will then take up No. 16.